# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72 ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಸೂಚನೆ:**

ಕೋಲಾರವು ಬರದ ಜಿಲ್ಲೆಯಾಗಿದ್ದರೂ ಅನೇಕ ಐತಿಹಾಸಿಕ ಪ್ರವಾಸಿ ತಾಣಗಳನ್ನು ಹೊಂದಿದೆ. ಆದರೆ ಅವುಗಳಲ್ಲಿ ಕೋಲಾರ ತಾಲ್ಲೂಕಿನಲ್ಲಿ ಅಂತರಗಂಗೆ, ಕೋಲಾರಮ್ಮ, ಸೋಮೇಶ್ವರ ದೇವಾಲಯ, ಸೀತಿ ಬೆಟ್ಟ ಮಾರ್ಕೋಂಡೇಶ್ವರ ಬೆಟ್ಟ ಪ್ರಮುಖ ಪ್ರವಾಸಿತಾಣವಾಗಿದೆ. ಇದೇ ರೀತಿಯಾಗಿ ಮುಳುಬಾಗಿಲು ತಾಲ್ಲೂಕಿನ ಕುರುಡುಮಲೆ ವಿನಾಯಕ ಸ್ವಾಮಿ, ನರಸಿಂಹತೀರ್ಥ, ಆಂಜನೇಯ ದೇವಾಲಯ, ಇದೇ ರೀತಿಯಾಗಿ ಬಂಗಾರಪೇಟೆಯಲ್ಲಿರುವ ಯರಗೋಳ್ ಡ್ಯಾಂ, ಮಾಲೂರು ಹಾಗೂ ಕೆ.ಜಿ.ಎಫ್ ತಾಲ್ಲೂಕುಗಳಲ್ಲಿ ಹಲವಾರು ಸುಪ್ರಸಿದ್ಧ ದೇವಸ್ಥಾನಗಳ ವೀಕ್ಷಣೆಗೆ ಪ್ರವಾಸಿಗರು ನಮ್ಮ ರಾಜ್ಯದವರನ್ನು ಒಳಗೊಂಡಂತೆ ಪಕ್ಕದ ಆಂದ್ರಪ್ರದೇಶ್, ತಮಿಳುನಾಡುಗಳಿಂದಲ್ಲೂ ಸಹ ಪ್ರವಾಸಿಗರು ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಆದರೆ ಇವರಿಗೆ ಮೂಲಸೌಕರ್ಯಗಳಾದ ನೀರು, ಶೌಚಾಲಯ, ರಸ್ತೆ ಹಾಗೂ ವಾಸ್ತವ್ಯಕ್ಕೆ ಯಾವುದೇ ವ್ಯವಸ್ಥೆ ಇಲ್ಲದಿರುವುದರಿಂದ ಪ್ರವಾಸಿಗರಿಗೆ ತೊಂದರೆಯಾಗುತ್ತಿದೆ. ಈ ಹಿನ್ನಲೆಯಲ್ಲಿ ಜಿಲ್ಲೆಯ ಪ್ರವಾಸಿತಾಣಗಳ ಅಭಿವೃದ್ಧಿಪಡಿಸಲು ಒತ್ತು ನೀಡಬೇಕೆಂದು, ಮಾನ್ಯ ಪ್ರವಾಸೋದ್ಯಮ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:**

1) **ಪ್ರವಾಸೋದ್ಯಮ ಇಲಾಖೆ:** ಕೋಲಾರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಈ ಕೆಳಕಂಡ ಪ್ರವಾಸಿ ತಾಣಗಳನ್ನು ಇಲಾಖೆಯಿಂದ ಗುರುತಿಸಲಾಗಿರುತ್ತದೆ.

| ಜಿಲ್ಲೆ | ತಾಲ್ಲೂಕು | ಪ್ರವಾಸಿ ತಾಣಗಳು |
|---|---|---|
| **ಕೋಲಾರ** | ಕೋಲಾರ | ಅಂತರಗಂಗೆ, ಆವನಿ, ಮಾರ್ಕೋಂಡೇಶ್ವರ ಬೆಟ್ಟ |
| | ಮಾಲೂರು | ಶಿವಾರಪಟ್ಟಣ. |
| | ಕೆ.ಜಿ.ಎಫ್ | ಬಂಗಾರು ತಿರುಪತಿ, ಕೋಟಿಲಿಂಗ - ಕಮ್ಮಸಂದ್ರ. ಕೋಲಾರ ಗೋಲ್ಡ್ ಮೈನ್ಸ್, ಬೇತಮಂಗಲ, ರಾಮಸಾಗರ ಕೆರೆ, ಯರಗೋಳ ಆಣೆಕಟ್ಟು. |
| | ಮುಳುಬಾಗಿಲು | ಮುಳುಬಾಗಿಲು |
| | ಬಂಗಾರಪೇಟೆ | ಬೂದಿಕೋಟೆ, ಯರಗೋಲ ಡ್ಯಾಂ, ಕ್ಯಾಸಂಬಳ್ಳಿ, ಮಾರ್ಕೋಂಡೇಶ್ವರ ಆಣೆಕಟ್ಟು. |

ಸದರಿ ಪ್ರವಾಸಿ ತಾಣಗಳಲ್ಲಿ, ಈಗಾಗಲೇ ಪ್ರವಾಸೋದ್ಯಮ ಇಲಾಖೆಯ ಅನುದಾನದ ಲಭ್ಯತೆಯಗನುಣವಾಗಿ ಈ ಕೆಳಕಂಡ ಶೌಚಾಲಯ, ಯಾತ್ರಿ ನಿವಾಸ ಮುಂತಾದ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲಾಗಿದೆ.

*** ಅಂತರಗಂಗೆ**

1. ಈ ಸ್ಥಳದಲ್ಲಿ 2007-08ನೇ ಸಾಲಿನಲ್ಲಿ ರೂ. 14.00 ಲಕ್ಷಗಳಲ್ಲಿ ಶೌಚಾಲಯ ನಿರ್ಮಾಣ ಮಾಡಿ, ಪ್ರವಾಸಿಗರ ಬಳಕೆಗೆ ಒದಗಿಸಲಾಗಿದೆ.

2. 2018-19ನೇ ಸಾಲಿನಲ್ಲಿ ಅಂತರಗಂಗೆ ಬೆಟ್ಟದ ಕಾಶಿ ವಿಶ್ವೇಶ್ವರ ದೇವಾಲಯಕ್ಕೆ ರಸ್ತೆ ಅಭಿವೃದ್ಧಿ ಪಡಿಸಲು ರೂ. 50.00 ಲಕ್ಷಗಳು ಮಂಜೂರಾಗಿದ್ದು, ಅರಣ್ಯ ಇಲಾಖೆ ವ್ಯಾಪಿಯಲ್ಲಿ ಬರುವುದರಿಂದ, ರಸ್ತೆ ನಿರ್ಮಾಣ ಮಾಡಲು ಅನುಮತಿ ನೀಡಿರುವುದಿಲ್ಲ, ಆದರೆ, ರಸ್ತೆ ಬದಲಾಗಿ ಜಿಪ್ಲೈನ್ ನಿರ್ಮಾಣ ಮಾಡಲು ಅರಣ್ಯ ಇಲಾಖೆಯವರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸಭೆಯಲ್ಲಿತಿಳಿಸಿರುತ್ತಾರೆ, ಈ ಬಗ್ಗೆ ಅರಣ್ಯ ಇಲಾಖೆಯಿಂದ ಪ್ರಸ್ತಾವನೆ ಬಂದನಂತರ ಮುಂದಿನ ಕ್ರಮವಹಿಸಲಾಗುವುದು.

*** ಕುರುಡು ಮಲೆ**

1. ಮುಳಬಾಗಿಲು ತಾಲ್ಲೂಕಿನ ಕುರುಡುಮಲೆ ಗಣಪತಿ ದೇವಾಲಯದ ಬಳಿ 2009-10ನೇ ಸಾಲಿನಲ್ಲಿ ರೂ.100.00 ಲಕ್ಷಗಳ ವೆಚ್ಚದಲ್ಲಿ ಯಾತ್ರಿನಿವಾಸ ಮತ್ತು ಶೌಚಾಲಯ ನಿರ್ಮಾಣ ಮಾಡಿ, ಪ್ರವಾಸಿಗರ ಬಳಕೆಗೆ ಒದಗಿಸಲಾಗಿದೆ

*** ಆಂಜನೇಯಸ್ವಾಮಿ ದೇವಾಲಯ**

1. ಮುಳಬಾಗಿಲು ಆಂಜನೇಯಸ್ವಾಮಿ ದೇವಾಲಯದ ಬಳಿ 2007-08 ನೇ ಸಾಲಿನಲ್ಲಿ ರೂ.50.00 ಲಕ್ಷಗಳ ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಾಣ ಮಾಡಿ, ಪ್ರವಾಸಿಗರ ಬಳಕೆಗೆ ಒದಗಿಸಲಾಗಿದೆ.

*** ಗರುಡ ದೇವಾಲಯ (ಕೊಲದೇವಿ)**

1. ಮುಳಬಾಗಿಲು ತಾಲ್ಲೂಕಿನ ಕೊಲದೇವಿ ಗ್ರಾಮದ ಗರುಡ ದೇವಾಲಯದ ಬಳಿ 2014-15ನೇ ಸಾಲಿನಲ್ಲಿ ರೂ.40.00 ಲಕ್ಷಗಳಲ್ಲಿ ಯಾತ್ರಿನಿವಾಸ ನಿರ್ಮಾಣ ಮಾಡಿ, ಪ್ರವಾಸಿಗರ ಬಳಕೆಗೆ ಒದಗಿಸಲಾಗಿದೆ.

*** ಬಂಗಾರು ತಿರುಪತಿ ದೇವಾಲಯದ**

1. ಕೆ.ಜಿ.ಎಫ್ ತಾಲ್ಲೂಕಿನ ಬಂಗಾರು ತಿರುಪತಿ ದೇವಾಲಯದ ಬಳಿ 2007-08ನೇ ಸಾಲಿನಲ್ಲಿ ರೂ. 4.00 ಲಕ್ಷಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲಾಗಿದೆ.

*** ಚಿಕ್ಕ ತಿರುಪತಿ ದೇವಾಲಯ**

1. ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿ ದೇವಾಲಯದ ಬಳಿ 2018-19ನೇ ಸಾಲಿನಲ್ಲಿ ರೂ.1.00 ಕೋಟಿಗಳ ವೆಚ್ಚದಲ್ಲಿ ಯಾತ್ರಿ ನಿವಾಸ, ಉದ್ಯಾನವನ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳ ಯೋಜನೆಗೆ ಅನುಮತಿ ದೊರೆತಿದ್ದು ಮೊದಲ ಕಂತಿನ ಅನುದಾನ ರೂ. 50.00 ಲಕ್ಷಗಳನ್ನು ಕೆ.ಆರ್. ಐ.ಡಿ.ಎಲ್ ಸಂಸ್ಥೆ ಗೆಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ.

* **ಕೋಲಾರಮ್ಮ ದೇವಾಲಯ**- ಈ ದೇವಾಲಯವು ಕೇಂದ್ರ ಪುರತಾತ್ವ ಇಲಾಖೆಗೆ ಸೇರಿದ್ದು, ಮುಜರಾಯಿ ಇಲಾಖೆಯಿಂದ ಶೌಚಾಲಯ ಹಾಗೂ ಪಾರ್ಕಿಂಗ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

***ಸೋಮೇಶ್ವರ ದೇವಾಲಯವು** – ಕೇಂದ್ರ ಪುರತಾತ್ವ ಇಲಾಖೆಗೆ ಸೇರಿದ್ದು, ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಹತ್ತಿರದಲ್ಲಿ ಯಾವುದೇ ನಿವೇಶನ ಲಭ್ಯವಿರುವುದಿಲ್ಲ.

* **ಆವನಿ ಬೆಟ್ಟ, ಸೀತಿ ಬೆಟ್ಟ ಹಾಗೂ ಕುರುಡುಮಲೆ** ಬೆಟ್ಟ ಈ ಪ್ರವಾಸಿತಾಣಗಳನ್ನು ಅಭಿವೃದ್ಧಿಪಡಿಸಲು ಡಿ.ಪಿ.ಆರ್‌ತಯಾರಿಸಿ ಅನುದಾನ ಬಿಡುಗಡೆಗೆ ಕೋರಿ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆರವರಿಂದ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ, ಸದರಿ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದಿಂದ, ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಅನುಮೋದನೆ ಕೋರಿ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.

ಮುಂದುವರೆದು, ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/08/ವೆಚ್ಚ-7/2024, ಬೆಂಗಳೂರು, ದಿನಾಂಕ: 15/04/2024 ರ ಪತ್ರದಲ್ಲಿನ ಅನುಬಂಧ-3 ರಲ್ಲಿ ಈ ಕೆಳಗಿನಂತೆ ತಿಳಿಸಲಾಗಿರುತ್ತದೆ.

**"ದೇವಸ್ಥಾನಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮುಜರಾಯಿ ಇಲಾಖೆಯಡಿ ಅನುದಾನ ಒದಗಿಸಿರುವುದರಿಂದ ಪ್ರವಾಸೋದ್ಯಮ ಇಲಾಖೆಯಡಿ ಯಾವುದೇ ದೇವಸ್ಥಾನಗಳ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು ಸಮಂಜಸವಿರುವುದಿಲ್ಲ ಹಾಗೂ ಖಾಸಗಿ ಜಾಗ ಅಥವಾ ಖಾಸಗಿ ಸಂಸ್ಥೆಯ ಪ್ರದೇಶದಲ್ಲಿ ಕೈಗೊಳ್ಳಲಾಗುವ ಯಾವುದೇ ಕಾಮಗಾರಿಗಳಿಗೆ ಬಂಡವಾಳ ಲೆಕ್ಕಶೀರ್ಷಿಕೆಯಡಿ ಅನುದಾನ ಬಿಡುಗಡೆ ಮಾಡಲು ನಿಯಮಗಳಲ್ಲಿ ಅವಕಾಶ ವಿರುವುದಿಲ್ಲ. ಆದ್ದರಿಂದ, ಇಂತಹ ಕಾಮಗಾರಿಗಳ ಬಗ್ಗೆ ಪರಿಶೀಲಿಸಿ ಅವುಗಳನ್ನು ಕೂಡಲೇ ಕೈ ಬಿಡುವಂತೆ ಆಡಳಿತ ಇಲಾಖೆಗೆ ತಿಳಿಸಲಾಗಿರುತ್ತದೆ".**

ಆದುದರಿಂದ ಮುಂದಿನ ದಿನಗಳಲ್ಲಿ ಈ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಒದಗಿಸಲು ಇಲಾಖೆಯಲ್ಲಿನ ಅನುದಾನದ ಲಭ್ಯತೆಯ ಅನುಗುಣವಾಗಿ ಪರಿಶೀಲಿಸಿ ಕ್ರಮವಹಿಸಲಾಗುವುದು.

**2) ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ-** ಕೋಲಾರ ಜಿಲ್ಲೆಯಲ್ಲಿ ರಾಜ್ಯ ಸಂರಕ್ಷಿತ ಸ್ಮಾರಕಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ.

2023-24ನೇ ಆರ್ಥಿಕ ಸಾಲಿನ ರಾಜ್ಯ ಕ್ರಿಯಾಯೋಜನೆಯಡಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ರಾಜ್ಯ ಸಂರಕ್ಷಿತ ಸ್ಮಾರಕವಾಗಿರುವ ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಕುರುಡುಮಲೆಯಲ್ಲಿರುವ ಶ್ರೀ ವಿನಾಯಕ ದೇವಾಲಯದ ಛಾವಣಿಯ ಸಂರಕ್ಷಣೆಯನ್ನು ರೂ.80.00 ಲಕ್ಷಗಳ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.

ಕೋಲಾರ ಜಿಲ್ಲೆ, ಕೋಲಾರ ನಗರದಲ್ಲಿರುವ ಹಳೆಯ ಜಿಲ್ಲಾಧಿಕಾರಿಗಳ ಕಛೇರಿಯ ಪರಂಪರಿಕ ಕಟ್ಟಡದ ಸಂರಕ್ಷಣಾ ಕಾಮಗಾರಿಯನ್ನು ರೂ.125.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.

**(ಎಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

**ಸಂಖ್ಯೆ:ಟಿ.ಓ.ಆರ್. 252 ಟಿ.ಡಿ.ಓ 2024**

# ಅನುಬಂಧ

## ಕೋಲಾರ ಜಿಲ್ಲೆ

| ಕ್ರಸಂ | ತಾಲ್ಲೂಕು | ಸ್ಥಳ | ಕ್ರಸಂ | ರಾಜ್ಯದಸ್ಮಾರಕಗಳು/ | ಕ್ರಸಂ | ಎ.ಎಸ್.ಐಸ್ಮಾರಕಗಳು/ನೆಲೆಗಳು | ಸರ್ಕಾರಿಆದೇಶ ಸಂಖ್ಯೆ |
|---|---|---|---|---|---|---|---|
| 1 | ಬಂಗಾರಪೇಟೆ | ಬೇತಮಂಗಲ | 1 | ವಿಜಯೇಂದ್ರದೇವಾಲಯ | | | |
| | ಬಂಗಾರಪೇಟೆ | ಬೂದಿಕೋಟೆ | | | 1 | ಹೈದರಲಿಯ ಜನ್ಮಸ್ಥಳ | |
| | ಬಂಗಾರಪೇಟೆ | ಹುನಕೊಂಡ | | - | 2 | ಪ್ರಾಗೈತಿಹಾಸಿಕನೆಲೆ | |
| 2 | ಕೋಲಾರ | ಕೋಲಾರ | 4 | ಬಾರಾಇಮಾಮ್ಮಕಾನ್ | 3 | ಕೋಲಾರಮ್ಮನ ದೇವಾಲಯ | No.D.8048 Edn, 86-25 Dated:12.09.1930 |
| | ಕೋಲಾರ | ಕಲ್ಲಂಡೂರು | 5 | ಶ್ರೀ ಈಶ್ವರ ದೇವಾಲಯ | | | ಕಸಂವಾ 09 ಕೆಎಂಯು 2015, ದಿನಾಂಕ:30.07.2015 |
| | " | " | | - | 4 | ಹೈದರಾಲಿಯತಂದೆಯಸಮಾಧಿ | |
| | " | " | | - | 5 | ಸೋಮೇಶ್ವರ ದೇವಾಲಯ | |
| | " | 1Āw | 6 | ಶ್ರೀ ಪತೀಶ್ವರ ದೇವಾಲಯ | | - | ಕಸಂವಾ 95 ಕೆಎಂಯು 2014, ದಿನಾಂಕ:07.05.2015 |
| | ಕೋಲಾರ | ವಕ್ಕಲೇರಿ | 7 | ಮಾರ್ಕಂಡೇಶ್ವರ ದೇವಾಲಯ | | - | |
| 3 | ಮಾಲೂರು | ಮಡಿವಾಳ | 8 | ಸ್ವಯಂಭೇಶ್ವರ ದೇವಾಲಯ | | - | |
| 4 | ಮುಳಬಾಗಿಲು | ಅವನಿ | | - | 6 | ರಾಮಲಿಂಗೇಶ್ವರದೇವಾಲಯ ಹಾಗೂಶಾಸನಗಳು | |

| | | | | | | | |
|---|---|---|---|---|---|---|---|
| | ಮುಳಬಾಗಿಲು | ದೇವರಾಜ ಸಮುದ್ರ ಗ್ರಾಮ | 9 | ದೊಡ್ಡಗರುಡ ಶಯನ, ಚಿಕ್ಕಗರುಡಶಯನ, ಆಗ್ನಿಸ್ತೋಮಗಳು, ದೊಡ್ಡಬಂಡೆತೋಪೆ-ಬಾವಿ, ತೋಪೆಬಾವಿಯಹತ್ತಿರದಬೃಂದಾವನ, ಗಾರೆಬಾವಿ; ಅದರಪಶ್ಚಿಮಕ್ಕೆಇರುವಮಂಟಪ; ಆಂಜನೇಯ | | - | ITY 144 KMU 84 dt.18.5.85 |
| | " | ಕುರುಡುಮಲೆ | 10 | ಸೋಮೇಶ್ವರ ದೇವಾಲಯ ಮತ್ತು ಶಾಸನಗಳು | | - | No.D.8048 Edn, 86-25 Dated:12.09.1930 |
| | " | " | 11 | ವಿನಾಯಕ ದೇವಾಲಯ | | - | No.D.8048 Edn, 86-25 Dated:12.09.1930 |
| | " | ಮುಳಬಾಗಿಲು | 12 | ಹೈದರಲಿದರ್ಗಾ | | - | No.D.8048 Edn, 86-25 Dated:12.09.1930 |
| | " | " | 13 | ಶ್ರೀಪಾದರಾಯರ ಬೃಂದಾವನ | | - | No.D.8048 Edn, 86-25 Dated:12.09.1930 |
| | " | " | 14 | ವಿಠ್ಠಲನಾರಾಯಣದೇವಾಲಯ | | - | |
| | " | ವಿರೂಪಾಕ್ಷಪುರ | 15 | ಈಶ್ವರದೇವಾಲಯ | | - | |
| **4** | **ತಾಲ್ಲೂಕುಗಳು** | | **15** | **ಸ್ಮಾರಕಗಳು/ನೆಲೆಗಳು** | **6** | **ಸ್ಮಾರಕಗಳು/ನೆಲೆಗಳು** | |